ದಿನಾಂಕ 01.06.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 5ನೇ ಪ್ರತಿವಾದಿ ಪರ ಶ್ರೀ ವಿ.ಎಸ್.ಎಸ್., ವಕೀಲರಿಂದಃ-

ಈ ಕೇಸನ್ನು ನನ್ನ ಮಗಳ ಜೀವನ ಪರಿಹಾರಕ್ಕಾಗಿ ಹಾಕಿದ್ದೇನೆ. ದಾವಾ ಸ್ವತ್ತುಗಳು ಒಂದು ಮನೆ, ಹಳೆ ಸರ್ವೇ ನಂ.103 ಹೊಸ ಸರ್ವೇ ನ 1101, ಸರ್ವೇ ನಂ.107 ಪಿ2 1 ಎಕರೆ 20 ಗುಂಟೆ, ಸರ್ವೇ ನಂ.107 ಪಿ3 20 ಗುಂಟೆ. ಮನೆ ವಿಸ್ತೀರ್ಣ 50X20. ಅದರ ಚಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಐಟಂ ನಂ.2 ಮತ್ತು 3ರ ವಿಸ್ತೀರ್ಣ 1 ಎಕರೆ 20 ಗುಂಟೆ ಮತ್ತು 20 ಗುಂಟೆ. ದಾವಾ ಐಟಂ ನಂ.2 ಮತ್ತು 3ರ ಚಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಐಟಂ ನಂ.2 ಮತ್ತು 3ರ ಚಕ್ಕುಬಂದಿ ವಾದಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಬಗ್ಗೆ ನನಗೆ ಏನೂ ಗೊತ್ತಿಲ್ಲ ಆದ್ದರಿಂದ ಚಕ್ಕುಬಂದಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಯ ತಾತನ ಹೆಸರು ಕೃಷ್ಣಪ್ಪ. ಅವರಿಗೆ 4 ಜನ ಮಕ್ಕಳು. ಅವರೆಂದರೆ ಪ್ರತಿವಾದಿ 2 ರಿಂದ 4 ಮತ್ತು ಪವಿತ್ರಾರವರು. ಪವಿತ್ರಾರವರು ತೀರಿಕೊಂಡಿದ್ದಾರೆ. ಅವರಿಗೆ ಮದುವೆಯಾಗಿತ್ತು. ಅವರಿಗೆ ಮಕ್ಕಳಿರಲಿಲ್ಲ. ಅವರ ಗಂಡ ಜೀವಂತವಿದ್ದಾರೆ. ಈ ದಾವೆಯಲ್ಲಿ ಅವರ ಗಂಡನನ್ನು ಪಾರ್ಟಿಯಾಗಿ ಮಾಡಿಲ್ಲ, ಏಕೆಂದರೆ ನನಗೆ ಸಂಬಂಧವಿಲ್ಲ. ಪವಿತ್ರಾರವರಿಗೆ ಗಂಡ ಇದ್ದಾರೆ ಎಂಬ ವಿಚಾರ ನನಗೆ ಗೊತ್ತಿದ್ದರೂ ಉದ್ದೇಶಪೂರ್ವಕವಾಗಿ ಅವರನ್ನು ಪಾರ್ಟಿ ಮಾಡಿಲ್ಲ ಎಂದರೆ ಸರಿಯಲ್ಲ. ಪವಿತ್ರಾರವರ ಗಂಡನ ಹೆಸರು ನನಗೆ ಗೊತ್ತಿಲ್ಲ. ಅವರಿಗೆ ಗಂಡ ಇರುವ ವಿಚಾರ ನನಗೆ ಮಗುವಾದ ನಂತರ ಗೊತ್ತಾಯಿತು. ಈ ದಾವೆ ಸಲ್ಲಿಸುವ ಕಾಲಕ್ಕೆ ಪವಿತ್ರಾರವರಿಗೆ ಗಂಡ ಇದ್ದಾರೆ ಎಂಬ ವಿಚಾರ ನನಗೆ ಗೊತ್ತಿತ್ತು

ಎಂದರೆ ಸರಿಯಲ್ಲ.

2. ನಾನು ವಂಶವೃಕ್ಷವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಂಶವೃಕ್ಷವನ್ನು ಹಾಜರುಪಡಿಸಿಲ್ಲದಿದ್ದರೂ ಸಹ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಹುಟ್ಟಿದ್ದು ದಿನಾಂಕ 01.03.2015 ರಲ್ಲಿ. ವಾದಿಯ ಜನನ ಪ್ರಮಾಣಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹಾಜರುಪಡಿಸಿಲ್ಲದಿದ್ದರೂ ಸಹ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ಮದುವೆಯಾದದ್ದು ದಿನಾಂಕ 27.03.2011 ರಲ್ಲಿ. ಮದುವೆಯಾದಾಗಿನಿಂದ ನಾನು ನನ್ನ ಗಂಡನ ಮನೆಯಲ್ಲೇ ವಾಸವಾಗಿದ್ದೆ. ವಾದಿ ಹುಟ್ಟಿದ ನಂತರವೂ ನಿಮ್ಮ ಗಂಡನ ಮನೆಯಲ್ಲೇ ವಾಸವಿದ್ದೀರಿ ಎಂದರೆ ಸಾಕ್ಷಿಯು ಇಲ್ಲ, ನನ್ನ ಯಜಮಾನರು ಮತ್ತು ನನ್ನ ಅತ್ತೆ ನನ್ನನ್ನು ಮನೆ ಬಿಟ್ಟು ಕಳುಹಿಸಿದರು ಎಂದು ನುಡಿಯುತ್ತಾರೆ. ನನ್ನ ಮಗುವಿಗೆ ಒಂದೂವರೆ ವರ್ಷ ವಯಸ್ಸಿದ್ದಾಗ ನಾನು ಮನೆ ಬಿಟ್ಟು ಹೋದೆ. ನನ್ನ ಅತ್ತೆ, ಮಾವ, ಗಂಡ ಮನೆ ಬಿಟ್ಟು ಕಳುಹಿಸಿದರು ಎಂದು ಪೊಲೀಸರಿಗೆ ದೂರು ಕೊಟ್ಟಿದ್ದೆ. ದೂರಿನ ಪ್ರತಿಯನ್ನು ಅಥವಾ ಹಿಂಬರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ಅತ್ತೆ, ಮಾವ, ಗಂಡನ ನಡುವೆ ಯಾವುದೇ ಜಗಳ ಆಗಿಲ್ಲ, ಯಾವುದೇ ದೂರು ಕೊಟ್ಟಿಲ್ಲ, ಆದ್ದರಿಂದ ಆ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಗರ್ಭಿಣಿಯಾಗಿದ್ದಾಗ ನನ್ನ ಗಂಡ, ಅತ್ತೆ, ಮಾವರವರು ನನಗೆ ಎಲ್ಲಾ ಸೌಕರ್ಯವನ್ನು ಒದಗಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮಗು ಹುಟ್ಟಿದ ನಂತರವೂ ಸಹ ಮಗುವಿಗೆ ಎಲ್ಲಾ ಸೌಕರ್ಯವನ್ನು ಕೊಡುತ್ತಿದ್ದರು ಎಂದರೆ ಸರಿಯಲ್ಲ. ಈ ಕೇಸು

ಹಾಕುವಾಗಲೂ ನಾನು ನನ್ನ ಗಂಡನ ಮನೆಯಲ್ಲೇ ವಾಸವಿದ್ದೆ ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಗಳು ನನ್ನನ್ನು ಮನೆಯಿಂದ ಹೊರಗೆ ಹಾಕಿದ ದಿನಾಂಕ, ತಿಂಗಳು ಗೊತ್ತಿಲ್ಲ, ಆದರೆ 2016 ರಲ್ಲಿ. ನನ್ನ ಗಂಡ, ಅತ್ತೆ, ಮಾವರವರು ನನ್ನನ್ನು ಮನೆಯಿಂದ ಹೊರಗೆ ಹಾಕಿದರು ಎಂದು ವಾದಪತ್ರದಲ್ಲಿ, ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಹೇಳಿಲ್ಲದಿದ್ದರೂ ಸಹ ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ಗಂಡನ ವಿರುದ್ಧ ಯಾವುದೇ ಜೀವನಾಂಶದ ಕೇಸು ಅಥವಾ ಕ್ರಿಮಿನಲ್ ಕೇಸು ಹಾಕಿಲ್ಲ. 5 ನೇ ಪ್ರತಿವಾದಿ ನನಗೆ ಗೊತ್ತು. 5 ನೇ ಪ್ರತಿವಾದಿ ದಾವಾ ಐಟಂ ನಂ.1 ರಲ್ಲಿ 10X18 ಅಡಿಗಳು ಆಸ್ತಿಯನ್ನು ಖರೀದಿ ಮಾಡಿದ್ದಾರೆ. ಕ್ರಯದ ವ್ಯಾಪಾರದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯ ಕ್ರಯಪತ್ರದಲ್ಲಿ 1 ನೇ ಪ್ರತಿವಾದಿ ವಾದಿಯ ಮೈನರ್ ಗಾರ್ಡಿಯನ್ ಆಗಿ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ 5 ನೇ ಪ್ರತಿವಾದಿಯ ಪರ ವಕೀಲರ ಮನವಿಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.